ಶ್ರೀ ಬಿ. ರಮಾನಾಥ್ ರೈ (ಸಾರಿಗೆ ಸಚಿವರು) :

ಅ) ನಿಜವಲ್ಲ.

ಆ) ಖಾಸಗಿ ಮ್ಯಾಕ್ಸಿಕ್ಯಾಬ್‌ಗಳ ಪೈಪೋಟಿಯನ್ನು ಪರಿಣಾಮಕಾರಿಯಾಗಿ ಎದುರಿಸುವ ಉದ್ದೇಶದಿಂದ ಕೈ ತೋರಿದಲ್ಲಿ ನಿಲ್ಲುವ ವಾಹನಗಳನ್ನು ಕಡಿಮೆ ದೂರದ ಮಾರ್ಗಗಳ ಮೇಲೆ ಓಡಿಸಲಾಗುತ್ತಿದ್ದು, ಕಡಿಮೆ ಮಾರ್ಗಗಳ ಮೇಲೆ ವಾಹನಗಳ ಉಪಯುಕ್ತತೆಯು ಅತೀ ಕಡಿಮೆ ಇರುವುದರಿಂದ ಇಂಥ ಮಾರ್ಗಗಳಿಗೆ ಹೊಸ ವಾಹನಗಳನ್ನು ಉಪಯೋಗಿಸುವುದು ಆರ್ಥಿಕವಾಗಿ ಮಿತವ್ಯಯಕಾರಿ ಎನಿಸುವುದಿಲ್ಲ. ಆದುದರಿಂದ ಈ ಉದ್ದೇಶಕ್ಕಾಗಿ ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುವ ಹಳೆಯ ವಾಹನಗಳನ್ನೇ ಉಪಯೋಗಿಸಲಾಗುತ್ತಿದೆ.

ಇ) ಬೆಳಗಾವಿ ವಿಭಾಗದ ಬೈಲಹೊಂಗಲ ಘಟಕದಲ್ಲಿ ಕೈ ತೋರಿದಲ್ಲಿ ನಿಲ್ಲುವ ಮೂರು ವಾಹನಗಳು ಇರುತ್ತವೆ.

ಈ) ಈ ಎಲ್ಲಾ ಮೂರು ವಾಹನಗಳು ಮಧ್ಯಮ ವಯಸ್ಸಿನ ವಾಹನಗಳಾಗಿದ್ದು, ತಾಂತ್ರಿಕವಾಗಿ ಸುಸ್ಥಿತಿಯಲ್ಲಿರುತ್ತವೆ.

ಉ) ನಿಜವಲ್ಲ.

ನಂಜನಗೂಡು ಪಟ್ಟಣ ಪುರಸಭೆ ಅಭಿವೃದ್ಧಿ

1061 (1462) - ಶ್ರೀ ಎ.ಆರ್. ಕೃಷ್ಣಮೂರ್ತಿ (ಸಂತೇಮರಳ್ಳಿ) ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನಂಜನಗೂಡು ಪಟ್ಟಣ ಪುರಸಭೆಗೆ 1999-2000ನೇ ಸಾಲಿನಿಂದ ಈ ವರೆವಿಗೆ ಸರ್ಕಾರದಿಂದ ಬಿಡುಗಡೆಯಾದ ಪ್ರತೀ ಸಾಲಿನ ಅನುದಾನ ಎಷ್ಟು? ಇದು ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗಿದೆಯೇ? (ವಿವರ ನೀಡುವುದು)

ಆ) ಪ್ರತೀ ಸಾಲು ಬಿಡುಗಡೆಯಾದ ಅನುದಾನದ ಹಣದಲ್ಲಿ ಕೈಗೊಂಡಿರುವ ಅಭಿವೃದ್ಧಿ ಕಾಮಗಾರಿಗಳ ನಾಮಾಂಕಿತ ಸಹಿತ ವಿವರ ನೀಡುವುದು.

ಇ) 10ನೇ ಹಣಕಾಸು ಯೋಜನೆಯಡಿ ಕಳೆದ 3 ಸಾಲಿನಿಂದ 2000-01 ನೇ ಸಾಲಿನವರೆಗೆ ಬಿಡುಗಡೆಯಾಗಿರುವ ಹಣ ಎಷ್ಟು? ಈ ಯೋಜನೆಯಡಿಯ ಹಣದಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು? (ವಿವರ ನೀಡುವುದು)

ಈ) ನಂಜನಗೂಡು ಪಟ್ಟಣಕ್ಕೆ ಹೆಚ್ಚುವರಿ ಕುಡಿಯುವ ನೀರಿನ ಯೋಜನೆಗೆ ಆಡಳಿತಾತ್ಮಕ ಹಾಗೂ ತಾಂತ್ರಿಕ ಮಂಜೂರಾತಿ ಯಾವಾಗ ದೊರೆತಿದೆ. ಕಾಮಗಾರಿ ಪ್ರಾರಂಭಗೊಂಡಿದ್ದು ಹಾಗೂ ಪೂರ್ಣಗೊಂಡಿದ್ದು ಯಾವಾಗ? ಇದಕ್ಕೆ ಮಂಜೂರಾಗಿರುವ ಒಟ್ಟು ಮೊಬಲಗು ಎಷ್ಟು?

ಉ) ಪಟ್ಟಣಕ್ಕೆ ಒಳಚರಂಡಿ ಯೋಜನೆ ಮಂಜೂರಾಗಿದೆಯೇ? ಆಗಿದ್ದಲ್ಲಿ, ಯಾವ ಸಾಲಿನಲ್ಲಿ ಮಂಜೂರಾಗಿದೆ? ಕಾಮಗಾರಿ ಯಾವ ಹಂತದಲ್ಲಿದೆ?

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಪೌರಾಡಳಿತ ರಾಜ್ಯ ಸಚಿವರು) :

ಅ) ಸರ್ಕಾರದ ರಾಜ್ಯ ಹಣಕಾಸು ಆಯೋಗದ ಅನುದಾನದಿಂದ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಳ್ಳಲು ಪೂರ್ಣ ಪ್ರಮಾಣದಲ್ಲಿ ಅನುದಾನ ಕೆಳಕಂಡಂತೆ ಬಿಡುಗಡೆ ಮಾಡಲಾಗಿದೆ.

1. 2000-01 ನೇ ಸಾಲಿಗೆ - ರೂ. 7,50,000-00
2. 2001-02 ನೇ ಸಾಲಿಗೆ - ರೂ. 25,000-00

ಆ) 1. ನೀಲಕಂಠ ನಗರದಲ್ಲಿ ಮಣ್ಣಿನ ಮತ್ತು ಜಲ್ಲಿ ರಸ್ತೆ ನಿರ್ಮಾಣ ಕಾಮಗಾರಿಯ ವೆಚ್ಚ ರೂ. 75, 000-00.

2. ನೀಲಕಂಠ ನಗರದಲ್ಲಿ 17 ಬಾಕ್ಸ್ ಮಾದರಿ ಚರಂಡಿ ನಿರ್ಮಾಣ ಕಾಮಗಾರಿಗಾಗಿ ಖರ್ಚು ರೂ. 4,00,000-00

3. ಎನ್.ಜಿ. ಓ. ಕಾಲೋನಿಯಲ್ಲಿ ಮಣ್ಣಿನ ರಸ್ತೆ ನಿರ್ಮಾಣ ಕಾಮಗಾರಿಗಾಗಿ ರೂ. 25,000-00.

4. ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲು ಅಂದಾಜು ರೂ. 2,75,000-00 ಗಳಿಗೆ ಅನುಮೋದನೆ ನೀಡಲಾಗಿದೆ.

ಇ)

ಸಾಲು	ಬಿಡುಗಡೆಯಾದ ಮೊಬಲಗು	ಖರ್ಚು	ಉಳಿಕೆ	ಕಾಮಗಾರಿಗಳ ವಿವರ
1998-99	7,50,000	7,50,000	-	ಪಟ್ಟಣ ವ್ಯಾಪ್ತಿಯಲ್ಲಿನ ರಸ್ತೆಗಳಿಗೆ ಡಾಂಬರೀಕರಣ ಮಾಡಿರುತ್ತದೆ.
1999-2000	30,33,302	9,64,548	20,68,754	145 ಸಂಖ್ಯೆ ಸೋಡಿಯಂ ದೀಪಗಳನ್ನು ಖರೀದಿಸಿ ಅಳವಡಿಸಲಾಗಿದೆ.
ಒಟ್ಟು	37,83,302	17,14,548	20,68,754	

ಈ) ನಂಜನಗೂಡು ಪಟ್ಟಣಕ್ಕೆ ಹೆಚ್ಚುವರಿ ಕುಡಿಯುವ ನೀರಿನ ಯೋಜನೆಗೆ ಆಡಳಿತಾತ್ಮಕ ಮಂಜೂರಾತಿಯನ್ನು ದಿನಾಂಕ: 25-10-1991 ರಂದು ಹಾಗೂ ತಾಂತ್ರಿಕ ಮಂಜೂರಾತಿಯನ್ನು ದಿನಾಂಕ: 14-8-1992 ರಲ್ಲಿ ನೀಡಿದೆ. ಸದರಿ ಕಾಮಗಾರಿಯು 1994-95 ರಲ್ಲಿ ಪ್ರಾರಂಭವಾಗಿರುತ್ತದೆ. ಸದರಿ ಕಾಮಗಾರಿಗೆ ರೂಪಾಯಿ 194.50 ಲಕ್ಷಗಳು, ಪರಿಷ್ಕೃತ ಅಂದಾಜು 430.00 ಲಕ್ಷಗಳು.

ಉ) ಸರ್ಕಾರದ ಪರಿಶೀಲನೆಯಲ್ಲಿದೆ.

ವಿದ್ಯುತ್ ಸರಬರಾಜು ಸುಧಾರಣೆಗೆ ಕೈಗೊಂಡ ಕ್ರಮಗಳು

1062 (1476) - ಶ್ರೀ ಲಕ್ಷ್ಮೀನಾರಾಯಣ ಎಂ.ಡಿ (ತುರುವೇಕೆರೆ) ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿದ್ಯುತ್ ಪೂರೈಕೆ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ಕುರಿತು ಯಾವುದಾದರೂ ಸಂಸ್ಥೆಯೊಂದಿಗೆ ಒಪ್ಪಂದ ಮಾಡಿಕೊಳ್ಳಲಾಗಿದೆಯೇ?

ಇ) ಇದು ಯಾವ ಸಂಸ್ಥೆ ಯಾವ ರಾಜ್ಯದ್ದು, ಇದರಿಂದ ವಿದ್ಯುತ್ ಸೇವೆ ಮತ್ತು ಆದಾಯ ಸಂಗ್ರಹಣೆಯಲ್ಲಿ ಮಹತ್ತರವಾದ ಬದಲಾವಣೆ ತರಲು ಸಾಧ್ಯವೇ?